Re.No. D. 221

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

| | |
|---|---|
| **भाग IX** | **अनुभाग 1** |
| **PART IX** | **SECTION 1** |
| ಭಾಗ **IX** | ವಿಭಾಗ 1 |

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.


| | | |
|---|---|---|
| सं 1, नई दिल्ली, गुरूवार, नवंबर 11, 2021 | कार्तिका 07, 1943 (शक) | खंड. 51 |
| No.1 New Delhi, Thursday, November 11, 2021 | Kartika 07, 1943 (Saka) | Vol. 51 |
| ಸಂ.1 ನವ ದೆಹಲಿ, ಗುರುವಾರ, ನವೆಂಬರ್ ೧೧, ೨೦೨೧ | ಕಾರ್ತಿಕ ೦೭, ೧೯೪೩ (ಶಕ) | ಸಂಪುಟ. 51 |


**Ministry of Law and Justice**
(Legislative Department)
New Delhi, 11th November, 2021

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 11ನೇ ನವೆಂಬರ್, 2021**

The Translation in Kannada of the following Act, namely:- (1) The Passports Act, 1967 (Act No. 15 of 1967) (2) The Slum Areas (Improvement and clearance) Act, 1956 (Act No. 96 of 1956) (3) The Prasar Bharati (Broadcasting Corporation of India) Act, 1990 (Act No. 25 of 1990) (4) The National Security Guard Act, 1986 (Act No. 47 of 1986) (5) The Rights of Persons with Disabilities Act, 2016 (Act No. 49 of 2016) (6) The Agricultural and Processed Food Products Export Development Authority Act, 1985 (Act No. 2 of 1986) (7) The Child And Adolescent Labour (Prohibition And Regulation) Act, 1986 (Act No. 61 Of 1986) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ಪಾಸ್‌ಪೋರ್ಟ್ ಅಧಿನಿಯಮ, 1967 (1967ರ ಅಧಿನಿಯಮ ಸಂಖ್ಯೆ 15) (2) ಕೊಳೆಗೇರಿಗಳ (ಸುಧಾರಣೆ ಮತ್ತು ತೆರವು) ಅಧಿನಿಯಮ, 1956 (1956ರ ಅಧಿನಿಯಮ ಸಂಖ್ಯೆ 96) (3) ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಅಧಿನಿಯಮ, 1990 (1990ರ ಅಧಿನಿಯಮ ಸಂಖ್ಯೆ 25) (4) ರಾಷ್ಟ್ರೀಯ ಭದ್ರತಾ ಪಡೆ ಅಧಿನಿಯಮ, 1986 (1986ರ ಅಧಿನಿಯಮ ಸಂಖ್ಯೆ 47) (5) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (2016ರ ಅಧಿನಿಯಮ ಸಂಖ್ಯೆ 49) (6) ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ((1986ರ ಅಧಿನಿಯಮ ಸಂಖ್ಯೆ 2) (7) ಮಕ್ಕಳು ಮತ್ತು ತರುಣರ ದುಡಿಮೆ (ನಿಷೇಧ ಮತ್ತು ನಿಯಂತ್ರಣ) ಅಧಿನಿಯಮ, 1986 (1986ರ ಅಧಿನಿಯಮ ಸಂಖ್ಯೆ 61)- ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಮಕ್ಕಳು ಮತ್ತು ತರುಣರ ದುಡಿಮೆ (ನಿಷೇಧ ಮತ್ತು ನಿಯಂತ್ರಣ) ಅಧಿನಿಯಮ, 1986

## (1986 ರ ಅಧಿನಿಯಮ ಸಂಖ್ಯೆ 61)

[23ನೇ ಡಿಸೆಂಬರ್, 1986.]

ಎಲ್ಲ ತರಹದ ವೃತ್ತಿಗಳಲ್ಲಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದನ್ನು ನಿಷೇಧಿಸುವ ಮತ್ತು ಅಪಾಯಕಾರಿ ವೃತ್ತಿಗಳಲ್ಲಿ ಹಾಗೂ ಅಂಥ ಪ್ರಕ್ರಿಯೆಗಳಲ್ಲಿ ತರುಣರನ್ನು ದುಡಿಮೆಗೆ ತೊಡಗಿಸುವುದನ್ನು ನಿಷೇಧಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

### ಭಾಗ I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಮಕ್ಕಳು ಮತ್ತು ತರುಣರ ದುಡಿಮೆ (ನಿಷೇಧ ಮತ್ತು ನಿಯಂತ್ರಣ) ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಭಾಗ III ನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಭಾಗ III- ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗಾಗಿ ಮತ್ತು ಬೇರೆ ಬೇರೆ ವರ್ಗಗಳ ಕಾರ್ಯಸಂಸ್ಥೆಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(i) "ತರುಣ" ಎಂದರೆ, ಹದಿನಾಲ್ಕು ವರ್ಷ ವಯಸ್ಸು ತುಂಬಿರುವ ಆದರೆ ಹದಿನೆಂಟು ವರ್ಷ ತುಂಬಿರದ ಒಬ್ಬ ವ್ಯಕ್ತಿ;

(iಎ) ಕೇಂದ್ರ ಸರ್ಕಾರ ಅಥವಾ ರೈಲ್ವೆ ಆಡಳಿತ ಅಥವಾ ದೊಡ್ಡ ಬಂದರು ಅಥವಾ ಗಣಿ ಅಥವಾ ತೈಲ ಕ್ಷೇತ್ರದ ನಿಯಂತ್ರಣದಲ್ಲಿರುವ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ "ಸಮುಚಿತ ಸರ್ಕಾರ" ಎಂದರೆ, ಕೇಂದ್ರ ಸರ್ಕಾರ ಮತ್ತು ಇತರ ಎಲ್ಲಾ ಸಂದರ್ಭಗಳಲ್ಲಿ ರಾಜ್ಯ ಸರ್ಕಾರ;

(ii) "ಮಕ್ಕಳು" ಎಂದರೆ, ಹದಿನಾಲ್ಕು ವರ್ಷ ವಯಸ್ಸು ತುಂಬಿಲ್ಲದಿರುವ ಅಥವಾ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 (2009 ರ 35)ರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಯಸ್ಸಿನ, -ಇವುಗಳಲ್ಲಿ ಯಾವುದು ಹೆಚ್ಚೋ ಆ ವಯಸ್ಸಿನ ವ್ಯಕ್ತಿ;

(iii) "ದಿವಸ" ಎಂದರೆ, ಮಧ್ಯರಾತ್ರಿಯಲ್ಲಿ ಪ್ರಾರಂಭವಾಗುವ ಇಪ್ಪತ್ತನಾಲ್ಕು ಗಂಟೆಗಳ ಅವಧಿ;

(iv) "ಕಾರ್ಯಸಂಸ್ಥೆ" ಎಂಬುದು ಅಂಗಡಿ, ವಾಣಿಜ್ಯ ಕಾರ್ಯಸಂಸ್ಥೆ, ಕಾರ್ಯಾಗಾರ, ಫಾರಂ, ವಸತಿಯ ಹೋಟೆಲ್, ಉಪಹಾರ ಗೃಹ, ಖಾನಾವಳಿ, ರಂಗಮಂಟಪ ಅಥವಾ ಸಾರ್ವಜನಿಕ ವಿನೋದದ ಅಥವಾ ಮನೋರಂಜನೆಯ ಇತರ ಸ್ಥಳವನ್ನು ಒಳಗೊಳ್ಳುತ್ತದೆ;

(v) ಅಧಿಭೋಗದಾರನಿಗೆ ಸಂಬಂಧಪಟ್ಟಂತೆ "ಕುಟುಂಬ" ಎಂದರೆ, ಒಬ್ಬ ವ್ಯಕ್ತಿ, ಸಂದರ್ಭಾನುಸಾರ ಅಂಥ ವ್ಯಕ್ತಿಯ ಹೆಂಡತಿ ಅಥವಾ ಗಂಡ ಮತ್ತು ಅವರ ಮಕ್ಕಳು ಹಾಗೂ ಅಂಥ ವ್ಯಕ್ತಿಯ ಸಹೋದರ ಅಥವಾ ಸಹೋದರಿ;

(vi) ಒಂದು ಕಾರ್ಯಸಂಸ್ಥೆ ಅಥವಾ ಕಾರ್ಯಾಗಾರಕ್ಕೆ ಸಂಬಂಧಪಟ್ಟಂತೆ "ಅಧಿಭೋಗದಾರ" ಎಂದರೆ, ಆ ಕಾರ್ಯಸಂಸ್ಥೆ ಅಥವಾ ಕಾರ್ಯಾಗಾರದ ವ್ಯವಹಾರಗಳ ಮೇಲೆ ಅಚಿತಿಮ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿ;

(vii) "ಬಂದರು ಪ್ರಾಧಿಕಾರ" ಎಂದರೆ, ಬಂದರಿನ ಆಡಳಿತ ನಡೆಸುವ ಯಾವುದೇ ಪ್ರಾಧಿಕಾರ;

(viii) "ನಿಯಮಿಸಲಾದುದು" ಎಂದರೆ, 18ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ix) "ವಾರ" ಎಂದರೆ, ಶನಿವಾರದ ರಾತ್ರಿಯಂದು ಅಥವಾ ಪರಿಶೀಲಕನು ಒಂದು ನಿರ್ದಿಷ್ಟ ಪ್ರದೇಶಕ್ಕಾಗಿ ಬರಹದಲ್ಲಿ ಅನುಮೋದಿಸಬಹುದಾದಂಥ ಇತರ ರಾತ್ರಿಯಂದು ಮಧ್ಯರಾತ್ರಿಯಲ್ಲಿ ಪ್ರಾರಂಭವಾಗುವ ಏಳು ದಿವಸಗಳ ಅವಧಿ;

(x) "ಕಾರ್ಯಾಗಾರ" ಎಂದರೆ, ಯಾವ ಆವರಣದಲ್ಲಿ ಯಾವುದೇ ಕೈಗಾರಿಕಾ ಸಂಸ್ಕರಣ ಕಾರ್ಯವನ್ನು ನಡೆಸಲಾಗುತ್ತಿದೆಯೋ ಆ ಯಾವುದೇ ಆವರಣ (ಅದರ ಎಲ್ಲೆ ಕಟ್ಟುಗಳನ್ನು ಒಳಗೊಂಡು), ಆದರೆ ಅದು ಯಾವ ಆವರಣಕ್ಕೆ ತತ್ಕಾಲದಲ್ಲಿ ಕಾರ್ಖಾನೆಗಳ ಅಧಿನಿಯಮ, 1948 (1948 ರ 63)ರ 67ನೇ ಪ್ರಕರಣದ ಉಪಬಂಧಗಳು ಅನ್ವಯವಾಗುವುದೋ ಆ ಯಾವುದೇ ಆವರಣವನ್ನು ಒಳಗೊಳ್ಳುವುದಿಲ್ಲ.

## ಭಾಗ II

## ಕೆಲವು ವೃತ್ತಿಗಳು ಮತ್ತು ಸಂಸ್ಕರಣ ಕಾರ್ಯಗಳಲ್ಲಿ ಮಕ್ಕಳ ನಿಯೋಜನೆಯ ನಿಷೇಧ

**3. ಯಾವುದೇ ವೃತ್ತಿಯಲ್ಲಿ ಮತ್ತು ಪ್ರಕ್ರಿಯೆಯಲ್ಲಿ ಮಕ್ಕಳ ನಿಯೋಜನೆಯ ನಿಷೇಧ.–** (1) ಯಾರೇ ಮಕ್ಕಳನ್ನು ಯಾವುದೇ ವೃತ್ತಿಯಲ್ಲಿ ಅಥವಾ ಪ್ರಕ್ರಿಯೆಯಲ್ಲಿ ನಿಯೋಜಿಸತಕ್ಕದ್ದಲ್ಲ ಅಥವಾ ಅಂಥ ಕೆಲಸ ಮಾಡಲು ಅನುಮತಿಸತಕ್ಕದ್ದಲ್ಲ.

(2) ಯಾರೇ ಮಕ್ಕಳು,–

(ಎ) ತಮ್ಮ ಶಾಲಾವಧಿಯ ನಂತರ ಅಥವಾ ರಜಾಕಾಲದಲ್ಲಿ ಈ ಅಧಿನಿಯಮದ ಅನುಸೂಚಿಯಲ್ಲಿ ನಿರೂಪಿಸಿರುವ ಯಾವುವೇ ಅಪಾಯಕಾರಿ ವೃತ್ತಿಗಳನ್ನು ಅಥವಾ ಅಂಥ ಪ್ರಕ್ರಿಯೆಗಳನ್ನು ಹೊರತುಪಡಿಸಿ, ತಮ್ಮ ಕುಟುಂಬದ ಕೆಲಸಕ್ಕೆ ಅಥವಾ ಕುಟುಂಬದ ಉದ್ದಿಮೆಗೆ ನೆರವು ನೀಡಿದರೆ;

(ಬಿ) ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಸುರಕ್ಷಾ ಕ್ರಮಗಳಿಗೆ ಒಳಪಟ್ಟು, ಸರ್ಕಸ್‌ನ್ನು ಹೊರತುಪಡಿಸಿ, ಜಾಹೀರಾತು, ಚಲನಚಿತ್ರಗಳು, ದೂರದರ್ಶನ ಧಾರಾವಾಹಿಗಳು ಅಥವಾ ಅಂಥ ಇತರ ಯಾವುದೇ ಮನರಂಜನೆ ಅಥವಾ ಕ್ರೀಡಾ ಚಟುವಟಿಕೆಗಳನ್ನು ಒಳಗೊಂಡಂತೆ, ಶ್ರವ್ಯ-ದೃಶ್ಯ ಮನರಂಜನಾ ಉದ್ಯಮ ಕ್ಷೇತ್ರದಲ್ಲಿ ಕಲಾವಿದನಾ(ಳಾ)ಗಿ ಕೆಲಸ ನಿರ್ವಹಿಸಿದರೆ

– ಅಂಥ ಮಕ್ಕಳಿಗೆ ಉಪ-ಪ್ರಕರಣ (1)ರಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ:

ಪರಂತು, ಈ ಖಂಡದ ಮೇರೆಗಿನ ಅಂಥ ಯಾವುದೇ ಕೆಲಸವು, ಮಕ್ಕಳ ಶಾಲಾ ಶಿಕ್ಷಣದ ಕಲಿಕೆಯ ಮೇಲೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಉಂಟು ಮಾಡತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) ಮಕ್ಕಳಿಗೆ ಸಂಬಂಧಪಟ್ಟಂತೆ "ಕುಟುಂಬ" ಎಂದರೆ, ಮಕ್ಕಳ ತಾಯಿ, ತಂದೆ, ಸಹೋದರ, ಸಹೋದರಿ ಮತ್ತು ತಂದೆಯ ಸಹೋದರಿ ಹಾಗೂ ಸಹೋದರ ಮತ್ತು ತಾಯಿಯ ಸಹೋದರಿ ಹಾಗೂ ಸಹೋದರ;

(ಬಿ) "ಕುಟುಂಬದ ಉದ್ದಿಮೆ" ಎಂದರೆ, ಕುಟುಂಬದ ಸದಸ್ಯರು ಇತರ ವ್ಯಕ್ತಿಗಳನ್ನು ತೊಡಗಿಸಿಕೊಂಡು ನಿರ್ವಹಿಸುವ ಆ ಯಾವುದೇ ಕೆಲಸ, ವೃತ್ತಿ, ತಯಾರಿಕೆ ಅಥವಾ ವ್ಯವಹಾರ;

(ಸಿ) "ಕಲಾವಿದ" ಎಂದರೆ, ನಟನಾಗಿ, ಹಾಡುಗಾರನಾಗಿ, ಕ್ರೀಡಾಪಟುವಾಗಿ ಅಥವಾ 2ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನಿಯಮಿಸಲಾದ, ಮನರಂಜನೆ ಅಥವಾ ಕ್ರೀಡೆಯಂಥ ಇತರ ಚಟುವಟಿಕೆಗಳನ್ನು ಹವ್ಯಾಸವಾಗಿ ಅಥವಾ ವೃತ್ತಿಯಾಗಿ ತನ್ನನ್ನು ನೇರವಾಗಿ ತೊಡಗಿಸಿಕೊಂಡು, ಪ್ರಸ್ತುತಪಡಿಸುವ ಅಥವಾ ಅಭ್ಯಾಸ ಮಾಡುವ ಮಕ್ಕಳು.

**3ಎ. ಕೆಲವು ಅಪಾಯಕಾರಿ ವೃತ್ತಿಗಳಲ್ಲಿ ಮತ್ತು ಅಂಥ ಪ್ರಕ್ರಿಯೆಗಳಲ್ಲಿ ತರುಣರ ನಿಯೋಜನೆಗೆ ನಿಷೇಧ.–** ಈ ಅಧಿನಿಯಮದ ಅನುಸೂಚಿಯಲ್ಲಿ ನಿರೂಪಿಸಿರುವ ಯಾವುವೇ ಅಪಾಯಕಾರಿ ವೃತ್ತಿಗಳಲ್ಲಿ ಅಥವಾ ಅಂಥ ಪ್ರಕ್ರಿಯೆಗಳಲ್ಲಿ ಯಾರೇ ತರುಣರನ್ನು ನಿಯೋಜಿಸತಕ್ಕದ್ದಲ್ಲ ಅಥವಾ ಅಂಥ ಕೆಲಸ ಮಾಡಲು ಅನುಮತಿಸತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ತರುಣರು ಅಪಾಯಕಾರಿಯಲ್ಲದ ಯಾವ ಸ್ವರೂಪದ ಕೆಲಸವನ್ನು ಮಾಡಲು ಅನುಮತಿಸಬಹುದಾಗಿದೆಯೋ ಆ ಕೆಲಸದ ಸ್ವರೂಪವನ್ನು ನಿರ್ದಿಷ್ಟಪಡಿಸಬಹುದು.

**4. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ.–** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅನುಸೂಚಿಯನ್ನು ತಿದ್ದುಪಡಿ ಮಾಡುವ ಉದ್ದೇಶದ ಬಗ್ಗೆ ಮೂರು ತಿಂಗಳುಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಕೊಟ್ಟ ತರುವಾಯ ಅಂಥದೇ ಅಧಿಸೂಚನೆಯ ಮೂಲಕ ಯಾವುದೇ ಅಪಾಯಕಾರಿ ವೃತ್ತಿಯನ್ನು ಅಥವಾ ಅಂಥ ಪ್ರಕ್ರಿಯೆಯನ್ನು ಅನುಸೂಚಿಗೆ ಸೇರಿಸಬಹುದು ಅಥವಾ ಅದನ್ನು ಅದರಿಂದ ಬಿಟ್ಟುಬಿಡಬಹುದು ಮತ್ತು ಆ ತರುವಾಯ ಆ ಅನುಸೂಚಿಯನ್ನು ತದನುಸಾರವಾಗಿ ತಿದ್ದುಪಡಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

**5. ತಾಂತ್ರಿಕ ಸಲಹಾ ಸಮಿತಿ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅನುಸೂಚಿಗೆ ವೃತ್ತಿಗಳು ಮತ್ತು ಸಂಸ್ಕರಣ ಕಾರ್ಯಗಳನ್ನು ಸೇರಿಸುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಲು ತಾಂತ್ರಿಕ ಸಲಹಾ ಸಮಿತಿ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಸಮಿತಿ ಎಂದು ಉಲ್ಲೇಖಿಸಲಾಗಿದೆ) ಎಂದು ಕರೆಯಲಾಗುವ ಸಲಹಾ ಸಮಿತಿಯನ್ನು ರಚಿಸಬಹುದು.

(2) ಸಮಿತಿಯು, ಅಧ್ಯಕ್ಷನನ್ನು ಮತ್ತು ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದಂಥ ಹತ್ತಕ್ಕಿಂತ ಹೆಚ್ಚಿಲ್ಲದಷ್ಟು ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಸಮಿತಿಯು, ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂತೆ ಆಗಿಂದಾಗ್ಗೆ ಸಭೆ ಸೇರಿಸತಕ್ಕದ್ದು ಮತ್ತು ತನ್ನದೇ ಆದ ಪ್ರಕ್ರಿಯೆಯನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಸಮಿತಿಯು ಉಪಸಮಿತಿಗಳನ್ನು ರಚಿಸುವುದು ಅವಶ್ಯವೆಂದು ಭಾವಿಸಿದರೆ, ಒಂದು ಅಥವಾ ಅದಕ್ಕಿಂತ ಹೆಚ್ಚಿನ ಉಪಸಮಿತಿಗಳನ್ನು ಅದು ರಚಿಸಬಹುದು ಮತ್ತು ಸಾಮಾನ್ಯವಾಗಿಯೇ ಆಗಲಿ ಅಥವಾ ಯಾವುದೇ ನಿರ್ದಿಷ್ಟ ವಿಷಯದ ಪರ್ಯಾಲೋಚನೆಗಾಗಿಯೇ ಆಗಲಿ ಯಾವುದೇ ಅಂಥ ಉಪಸಮಿತಿಗೆ ಸಮಿತಿಯ ಸದಸ್ಯನಲ್ಲದೆ ಇರುವ ಯಾವುದೇ ವ್ಯಕ್ತಿಯನ್ನು ನೇಮಕ ಮಾಡಬಹುದು.

(5) ಸಮಿತಿಯ ಅಧ್ಯಕ್ಷನ ಮತ್ತು ಇತರ ಸದಸ್ಯರ ಪದಾವಧಿ, ಅವರ ಪದದಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿ ಮತ್ತು ಅವರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು ಯಾವುವಾದರೂ ಇದ್ದರೆ, ಅವುಗಳು ಮತ್ತು ಯಾವ ಷರತ್ತುಗಳಿಗೊಳಪಟ್ಟು ಆ ಸಮಿತಿಯು ಯಾವುದೇ ಅದರ ಉಪಸಮಿತಿಯ ಸದಸ್ಯನೆಂದು ಸಮಿತಿಯ ಸದಸ್ಯನಾಗಿಲ್ಲದಿರುವ ಯಾರೇ ವ್ಯಕ್ತಿಯನ್ನು ಆ ಸಮಿತಿಯು ನೇಮಕ ಮಾಡಬಹುದೋ ಆ ಷರತ್ತುಗಳು ಮತ್ತು ಪರಿಬಂಧಗಳು.

## ಭಾಗ III

### ತರುಣರ ಕೆಲಸದ ಷರತ್ತುಗಳ ವಿನಿಯಮನ

**6. ಈ ಭಾಗದ ಅನ್ವಯ.–** ಈ ಭಾಗದ ಉಪಬಂಧಗಳು, ಯಾವ ಕಾರ್ಯಸಂಸ್ಥೆಯಲ್ಲಿ 3ಎ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುವೇ ವೃತ್ತಿಗಳು ಅಥವಾ ಸಂಸ್ಕರಣ ಕಾರ್ಯಗಳನ್ನು ನಡೆಸುತ್ತಿಲ್ಲವೋ ಆ ಕಾರ್ಯಸಂಸ್ಥೆ ಅಥವಾ ಸಂಸ್ಕರಣ ಕಾರ್ಯಗಳನ್ನು ನಡೆಸುತ್ತಿಲ್ಲವೋ ಆ ಕಾರ್ಯಸಂಸ್ಥೆ ಅಥವಾ ಕಾರ್ಯಸಂಸ್ಥೆಗಳ ವರ್ಗಕ್ಕೆ ಅನ್ವಯವಾಗತಕ್ಕದ್ದು.

**7. ಕೆಲಸದ ವೇಳೆಗಳು ಮತ್ತು ಅವಧಿ.–** (1) ಯಾರೇ ತರುಣನನ್ನು, ಕಾರ್ಯಸಂಸ್ಥೆ ಅಥವಾ ಕಾರ್ಯಸಂಸ್ಥೆಗಳ ವರ್ಗಕ್ಕಾಗಿ ನಿಯಮಿಸಬಹುದಾದಂಥ ಗಂಟೆಗಳನ್ನು ಮೀರಿ, ಯಾವುದೇ ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಹಾಗೆ ಮಾಡಲು ಅನುಮತಿಸತಕ್ಕದ್ದಲ್ಲ.

(2) ಪ್ರತಿಯೊಂದು ದಿವಸದ ಕೆಲಸದ ಅವಧಿಯನ್ನು, ಯಾವುದೇ ಅವಧಿಯು ಮೂರು ಗಂಟೆಗಳನ್ನು ಮೀರದ ಹಾಗೆ ನಿಗದಿಪಡಿಸತಕ್ಕದ್ದು ಮತ್ತು ಯಾರೇ ತರುಣನು ಕನಿಷ್ಠ ಪಕ್ಷ ಒಂದು ಗಂಟೆಯವರೆಗೆ ವಿಶ್ರಾಂತಿಗಾಗಿ ಬಿಡುವು ಹೊಂದಿದ್ದ ಹೊರತು ಮೂರು ಗಂಟೆಗಳಿಗಿಂತ ಹೆಚ್ಚಿಗೆಯಾಗಿ ಕೆಲಸ ಮಾಡತಕ್ಕದ್ದಲ್ಲ.

(3) ಉಪಪ್ರಕರಣ (2)ರ ಮೇರೆಗೆ ತರುಣನ ವಿಶ್ರಾಂತಿಗಾಗಿ ಬಿಡುವು ಒಳಗೊಂಡು, ಯಾವುದೇ ದಿವಸದಂದು ಆ ತರುಣನು ಕೆಲಸಕ್ಕಾಗಿ ಕಾಯುವಲ್ಲಿ ಕಳೆದ ಕಾಲವನ್ನು ಒಳಗೊಂಡು ತರುಣನ ಕೆಲಸದ ಅವಧಿಯು ಆರು ಗಂಟೆಗಳಿಗಿಂತ ಹೆಚ್ಚಿಗೆಯಾಗದ ಹಾಗೆ ಅದನ್ನು ವ್ಯವಸ್ಥೆ ಮಾಡತಕ್ಕದ್ದು.

(4) ಯಾರೇ ತರುಣನನ್ನು ಸಾಯಂಕಾಲ 7 ಗಂಟೆಯಿಂದ ಬೆಳಿಗ್ಗೆ 8 ಗಂಟೆಯ ನಡುವೆ ಕೆಲಸ ಮಾಡಲು ಅನುಮತಿಸತಕ್ಕದ್ದಲ್ಲ ಅಥವಾ ಕೆಲಸ ಮಾಡಬೇಕೆಂದು ಅಗತ್ಯಪಡಿಸತಕ್ಕದ್ದಲ್ಲ.

(5) ಓವರ್ ಟೈಂ ಕೆಲಸ ಮಾಡಲು ಯಾರೇ ತರುಣನನ್ನು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅದಕ್ಕೆ ಅನುಮತಿ ನೀಡತಕ್ಕದ್ದಲ್ಲ.

(6) ಯಾರೇ ತರುಣನನ್ನು, ಯಾವ ದಿವಸದಂದು ಅವನು ಈಗಾಗಲೇ ಒಂದು ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವನೋ ಆ ಯಾವುದೇ ದಿವಸದಂದು ಯಾವುದೇ ಇನ್ನೊಂದು ಕಾರ್ಯಸಂಸ್ಥೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅದಕ್ಕೆ ಅನುಮತಿಸತಕ್ಕದ್ದಲ್ಲ.

**8. ವಾರದ ರಜಾ ದಿವಸಗಳು.–** ಒಂದು ಕಾರ್ಯಸಂಸ್ಥೆಯಲ್ಲಿ ನಿಯೋಜಿತವಾಗಿರುವ ಪ್ರತಿಯೊಬ್ಬ ತರುಣನಿಗೆ ಪ್ರತಿಯೊಂದು ವಾರದಲ್ಲಿ ಒಂದು ಇಡೀ ದಿವಸದ ರಜೆಯನ್ನು ಕೊಡತಕ್ಕದ್ದು; ಆ ದಿವಸವನ್ನು, ಅಧಿಭೋಗದಾರನು ಆ ಕಾರ್ಯಸಂಸ್ಥೆಯಲ್ಲಿ ಎದ್ದುಕಾಣುವ ಸ್ಥಳದಲ್ಲಿ, ಖಾಯಂ ಆಗಿ ಪ್ರದರ್ಶಿಸಿದ ನೋಟೀಸಿನಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ದಿವಸವನ್ನು ಅಧಿಭೋಗದಾರನು ಮೂರು ತಿಂಗಳಿಗೆ ಒಂದು ಬಾರಿಗಿಂತ ಹೆಚ್ಚಿಗೆಯಾಗಿ ಬದಲಾಯಿಸತಕ್ಕದ್ದಲ್ಲ.

**9. ಪರಿಶೀಲಕನಿಗೆ ನೋಟೀಸು.–** (1) ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಯಾವ ಕಾರ್ಯಸಂಸ್ಥೆಯಲ್ಲಿ ಆ ತರುಣನನ್ನು ನಿಯೋಜಿಸಕೊಳ್ಳಲಾಗಿತ್ತೋ ಅಥವಾ ಕೆಲಸ ಮಾಡಲು ಅನುಮತಿಸಲಾಗಿತ್ತೋ ಆ ಕಾರ್ಯಸಂಸ್ಥೆಗೆ ಸಂಬಂಧಪಟ್ಟ ಪ್ರತಿಯೊಬ್ಬ ಅಧಿಭೋಗದಾರನು, ಅಂಥ ಪ್ರಾರಂಭದಿಂದ ಮೂವತ್ತು ದಿವಸಗಳ ಅವಧಿಯೊಳಗೆ ಆ ಕಾರ್ಯಸಂಸ್ಥೆಯು ಇರುವ ಸ್ಥಳೀಯ ಪರಿಮಿತಿಗಳೊಳಗಿನ ಪರಿಶೀಲಕನಿಗೆ ಅಂಥ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ ಈ ಕೆಳಕಂಡ ವಿವರಗಳನ್ನೊಳಗೊಂಡ ಬರಹದಲ್ಲಿನ ನೋಟೀಸನ್ನು ಕಳುಹಿಸತಕ್ಕದ್ದು, ಎಂದರೆ:–

(ಎ) ಆ ಕಾರ್ಯಸಂಸ್ಥೆಯ ಹೆಸರು ಮತ್ತು ಅದು ಇರುವ ಸ್ಥಳ;

(ಬಿ) ಆ ಕಾರ್ಯಸಂಸ್ಥೆಯ ವಾಸ್ತವ ವ್ಯವಸ್ಥಾಪನೆಯನ್ನು ಹೊಂದಿರುವ ವ್ಯಕ್ತಿಯ ಹೆಸರು;

(ಸಿ) ಆ ಕಾರ್ಯಸಂಸ್ಥೆಗೆ ಸಂಬಂಧಪಟ್ಟ ಪತ್ರ ವ್ಯವಹಾರಗಳನ್ನು ಕಳುಹಿಸಬೇಕಾಗಿರುವಂಥ ವಿಳಾಸ; ಮತ್ತು

(ಡಿ) ಆ ಕಾರ್ಯಸಂಸ್ಥೆಯಲ್ಲಿ ನಡೆಸಲಾಗುತ್ತಿರುವ ವೃತ್ತಿ ಅಥವಾ ಸಂಸ್ಕರಣ ಕಾರ್ಯದ ಸ್ವರೂಪ.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದ ತರುವಾಯ ಯಾರೇ ತರುಣನನ್ನು ನಿಯೋಜಿಸಿಕೊಳ್ಳುವ ಅಥವಾ ಕೆಲಸ ಮಾಡಲು ಅನುಮತಿಸುವ ಪ್ರತಿಯೊಬ್ಬ ಅಧಿಭೋಗದಾರನು ಅಂಥ ನಿಯೋಜನೆಯ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ ಯಾರ ಸ್ಥಳೀಯ ಪರಿಮಿತಿಗಳೊಳಗೆ ಆ ಕಾರ್ಯಸಂಸ್ಥೆಯು ಇರುವುದೋ ಆ ಸ್ಥಳೀಯ ಪರಿಮಿತಿಗಳೊಳಗೆ ಪರಿಶೀಲಕನಿಗೆ ಅಂಥ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ, (1)ನೇ ಉಪಪ್ರಕರಣದಲ್ಲಿ ನಮೂದಿಸಲಾಗಿರುವ ವಿವರಗಳನ್ನೊಳಗೊಂಡಿರುವ ಬರಹದಲ್ಲಿನ ನೋಟೀಸನ್ನು ಕಳುಹಿಸತಕ್ಕದ್ದು.

**ವಿವರಣೆ.**– ಉಪಪ್ರಕರಣ (1) ಮತ್ತು (2)ರ ಉದ್ದೇಶಗಳಿಗಾಗಿ, ಒಂದು ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಪ್ರಾರಂಭದ ದಿನಾಂಕ ಎಂದರೆ, ಅಂಥ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ ಈ ಅಧಿನಿಯಮವನ್ನು ಜಾರಿಗೆ ತರುವ ದಿನಾಂಕ.

(3) ಪ್ರಕರಣ 7, 8 ಮತ್ತು 9ರಲ್ಲಿ ಇರುವುದು ಯಾವುದೂ, ಯಾವ ಕಾರ್ಯಸಂಸ್ಥೆಯಲ್ಲಿ ಅಧಿಭೋಗದಾರನು ತನ್ನ ಕುಟುಂಬದ ನೆರವಿನೊಂದಿಗೆ ಯಾವುದೇ ಸಂಸ್ಕರಣ ಕಾರ್ಯವನ್ನು ನಡೆಸುತ್ತಿರುವನೋ ಆ ಯಾವುದೇ ಕಾರ್ಯಸಂಸ್ಥೆಗೆ ಅಥವಾ ಸರ್ಕಾರವು ಸ್ಥಾಪಿಸಿದ ಅಥವಾ ಅದರಿಂದ ನೆರವನ್ನು ಪಡೆಯುತ್ತಿರುವ ಅಥವಾ ಮನ್ನಣೆಯನ್ನು ಪಡೆದಿರುವ ಯಾವುದೇ ಕಾರ್ಯಸಂಸ್ಥೆಗೆ ಅನ್ವಯವಾಗತಕ್ಕದ್ದಲ್ಲ.

**10. ವಯಸ್ಸಿನ ಬಗ್ಗೆ ವಿವಾದಗಳು.**– ಒಂದು ಕಾರ್ಯಸಂಸ್ಥೆಯಲ್ಲಿ ನಿಯೋಜಿತನಾಗಿರುವ ಅಥವಾ ಕೆಲಸ ಮಾಡಲು ಅನುಮತಿಸಲಾಗಿರುವ ಯಾರೇ ತರುಣನ ವಯಸ್ಸಿನ ಬಗ್ಗೆ ಪರಿಶೀಲಕ ಮತ್ತು ಅಧಿಭೋಗದಾರನ ನಡುವೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅಂಥ ತರುಣನ ವಯಸ್ಸಿನ ಬಗ್ಗೆ ನಿಯಮಿಸಿದ ವೈದ್ಯಾಧಿಕಾರಿಯು ಕೊಟ್ಟ ಪ್ರಮಾಣಪತ್ರವು ಇಲ್ಲದೆ ಇರುವಲ್ಲಿ ಪರಿಶೀಲಕನು ಆ ಪ್ರಶ್ನೆಯನ್ನು ನಿಯಮಿಸಿದ ವೈದ್ಯಾಧಿಕಾರಿಗೆ ತೀರ್ಮಾನಕ್ಕಾಗಿ ಒಪ್ಪಿಸತಕ್ಕದ್ದು.

**11. ರಿಜಿಸ್ಟರನ್ನು ಇಟ್ಟುಕೊಂಡು ಬರುವುದು.**– ಪ್ರತಿಯೊಬ್ಬ ಅಧಿಭೋಗದಾರನು, ಯಾವುದೇ ಕಾರ್ಯಸಂಸ್ಥೆಯಲ್ಲಿ ನಿಯೋಜಿತರಾದ ಅಥವಾ ಕೆಲಸ ಮಾಡಲು ಅನುಮತಿಸಲಾದ ತರುಣನಿಗೆ ಸಂಬಂಧಿಸಿದಂತೆ ಕೆಲಸದ ವೇಳೆಗಳಲ್ಲಿ ಅಥವಾ ಯಾವುದೇ ಅಂಥ ಕಾರ್ಯಸಂಸ್ಥೆಯಲ್ಲಿ ಕೆಲಸವು ನಡೆಯುತ್ತಿರುವ ಎಲ್ಲಾ ಕಾಲಗಳಲ್ಲಿ ಪರಿಶೀಲಕನಿಂದ ಪರಿಶೀಲನೆಗಾಗಿ–

(ಎ) ಹಾಗೆ ನಿಯೋಜನೆಗೊಂಡ ಅಥವಾ ಕೆಲಸ ಮಾಡಲು ಅನುಮತಿಸಲಾದ ಪ್ರತಿಯೊಬ್ಬ ತರುಣನ ಹೆಸರು ಮತ್ತು ಜನ್ಮ ದಿನಾಂಕ;

(ಬಿ) ಯಾವುದೇ ಅಂಥ ತರುಣನ ಕೆಲಸದ ವೇಳೆಗಳು ಮತ್ತು ಅವಧಿಗಳು ಮತ್ತು ಅವನು ಹಕ್ಕುಳ್ಳವನಾಗಿರುವಂಥ ವಿಶ್ರಾಂತಿಯ ಮಧ್ಯಂತರಗಳು;

(ಸಿ) ಯಾವುದೇ ಅಂಥ ತರುಣನ ಕೆಲಸದ ಸ್ವರೂಪ; ಮತ್ತು

(ಡಿ) ನಿಯಮಿಸಬಹುದಾದಂಥ ಇತರ ವಿವರಗಳು

–ಇವುಗಳನ್ನು ತೋರಿಸುವ, ಲಭ್ಯವಾಗಿರಬೇಕಾದ ರಿಜಿಸ್ಟರನ್ನು ಇಟ್ಟುಕೊಂಡು ಬರತಕ್ಕದ್ದು.

**12. 3ಎ ಮತ್ತು 14ನೇ ಪ್ರಕರಣದ ಸಾರಾಂಶವನ್ನೊಳಗೊಂಡ ನೋಟೀಸನ್ನು ಪ್ರದರ್ಶಿಸುವುದು.**– ಪ್ರತಿಯೊಂದು ರೈಲ್ವೆ ಆಡಳಿತ, ಪ್ರತಿಯೊಂದು ಬಂದರು ಪ್ರಾಧಿಕಾರ ಮತ್ತು ಪ್ರತಿಯೊಬ್ಬ ಅಧಿಭೋಗದಾರನು 3ಎ ಮತ್ತು 14ನೇ ಪ್ರಕರಣಗಳ ಸಾರಾಂಶವನ್ನೊಳಗೊಂಡ ಸ್ಥಳೀಯ ಭಾಷೆಯ ಮತ್ತು ಇಂಗ್ಲೀಷ್ ಭಾಷೆಯಲ್ಲಿನ ನೋಟೀಸನ್ನು ಪ್ರದರ್ಶಿಸುವಂತೆ ಮಾಡತಕ್ಕದ್ದು.

**13. ಆರೋಗ್ಯ ಮತ್ತು ಸುರಕ್ಷೆ.**– (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ಕಾರ್ಯಸಂಸ್ಥೆ ಅಥವಾ ಕಾರ್ಯಸಂಸ್ಥೆಗಳ ವರ್ಗದಲ್ಲಿ ನಿಯೋಜಿತರಾದ ಅಥವಾ ಕೆಲಸ ಮಾಡಲು ಅನುಮತಿಸಲಾದ ತರುಣನ ಆರೋಗ್ಯ ಮತ್ತು ಸುರಕ್ಷೆಗಾಗಿ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಸದರಿ ನಿಯಮಗಳು ಈ ಕೆಳಕಂಡ ಎಲ್ಲಾ ವಿಷಯಗಳ ಬಗ್ಗೆ ಅಥವಾ ಯಾವುದೇ ವಿಷಯ ಬಗ್ಗೆ ಉಪಬಂಧಿಸಬಹುದು;

(ಎ) ಕೆಲಸದ ಸ್ಥಳದಲ್ಲಿನ ಸ್ವಚ್ಛತೆ ಮತ್ತು ಉಪದ್ರವದಿಂದ ಅದು ಮುಕ್ತವಾಗಿರುವುದು;

(ಬಿ) ನಿರುಪಯುಕ್ತ ಪದಾರ್ಥಗಳ ಮತ್ತು ಹೊರ ಹರಿಯುವಿಕೆಗಳನ್ನು ವಿಲೆ ಮಾಡುವುದು;

(ಸಿ) ವಾಯು ಸಂಚಾರ ಮತ್ತು ಉಷ್ಣಾಂಶ;

(ಡಿ) ಧೂಳು ಮತ್ತು ಹೊಗೆ;

(ಇ) ಕೃತಕ ಆರ್ದ್ರೀಕರಣ;

(ಎಫ್) ದೀಪದ ವ್ಯವಸ್ಥೆ;

(ಜಿ) ಕುಡಿಯುವ ವ್ಯವಸ್ಥೆ;

(ಹೆಚ್) ಕಕ್ಕಸು ಮತ್ತು ಮೂತ್ರಿಗಳು;

(ಐ) ಪೀಕದಾನಿ;

(ಜೆ) ಯಂತ್ರ ಸಾಮಗ್ರಿಗೆ ಕಟಕಟೆ ಹಾಕುವುದು;

(ಕೆ) ಚಾಲನೆಯಲ್ಲಿರುವ ಯಂತ್ರ ಸಾಮಗ್ರಿಯಲ್ಲಿ ಅಥವಾ ಅದರ ಹತ್ತಿರದ ಕೆಲಸ;

(ಎಲ್) ಅಪಾಯಕಾರಿ ಯಂತ್ರ ಸಾಮಗ್ರಿಗಳ ಬಳಿ ತರುಣರ ನಿಯೋಜನೆ;

(ಎಮ್) ಅಪಾಯಕಾರಿ ಯಂತ್ರ ಸಾಮಗ್ರಿಗಳ ಬಳಿ ತರುಣರ ನಿಯೋಜನೆಗೆ ಸಂಬಂಧಪಟ್ಟಂತೆ ಅನುದೇಶಗಳು, ತರಬೇತಿ ಮತ್ತು ಮೇಲ್ವಿಚಾರಣೆ;

(ಎನ್) ವಿದ್ಯುತ್ತನ್ನು ನಿಲ್ಲಿಸುವುದಕ್ಕಾಗಿ ಸಾಧನ;

(ಒ) ಸ್ವಯಂಚಾಲಿತ ಯಂತ್ರ ಸಾಮಗ್ರಿಗಳು;

(ಪಿ) ಹೊಸ ಯಂತ್ರ ಸಾಮಗ್ರಿಗಳ ಸರಿಪಡಿಸುವಿಕೆ;

(ಕ್ಯೂ) ಮಹಡಿ, ಮೆಟ್ಟಿಲುಗಳು ಮತ್ತು ಪ್ರವೇಶಾವಕಾಶ ಸಾಧನಗಳು;

(ಆರ್) ಗುಂಡಿಗಳು, ಸಂಪುಗಳು, ನೆಲಗಟ್ಟುಗಳಲ್ಲಿ ಕಿಂಡಿಗಳು, ಇತ್ಯಾದಿ;

(ಎಸ್) ಮಿತಿಮೀರಿದ ತೂಕಗಳು;

(ಟಿ) ಕಣ್ಣುಗಳ ಸಂರಕ್ಷಣೆ;

(ಯು) ಸ್ಫೋಟಕ ಅಥವಾ ದಹ್ಯ ಧೂಳು, ಅನಿಲ ಇತ್ಯಾದಿ;

(ವಿ) ಬೆಂಕಿಯ ಸಂದರ್ಭದಲ್ಲಿ ಮುನ್ನೆಚ್ಚರಿಕೆ;

(ಡಬ್ಲ್ಯೂ) ಕಟ್ಟಡಗಳ ನಿರ್ವಹಣೆ; ಮತ್ತು

(ಎಕ್ಸ್) ಕಟ್ಟಡಗಳ ಮತ್ತು ಯಂತ್ರ ಸಾಮಗ್ರಿಯ ಸುರಕ್ಷೆ.

## ಭಾಗ IV

### ಸಂಕೀರ್ಣ

**14. ದಂಡಗಳು.–** (1) ಪ್ರಕರಣ 3ರ ಉಪಬಂಧಗಳನ್ನು ಉಲ್ಲಂಘಿಸಿ, ಯಾರೇ ಮಕ್ಕಳನ್ನು ಯಾವುದೇ ಕೆಲಸಕ್ಕೆ ನಿಯೋಜಿಸುವ ಅಥವಾ ಕೆಲಸ ಮಾಡಲು ಯಾರೇ ಮಕ್ಕಳಿಗೆ ಅನುಮತಿಸುವ ಯಾರೇ ಆಗಲಿ, ಆರು ತಿಂಗಳುಗಳಿಗೆ ಕಡಿಮೆಯಿಲ್ಲದಂಥ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದಂಥ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಇವರೆಡರಿಂದಲೂ ದಂಡನೀಯರಾಗತಕ್ಕದ್ದು:

ಪರಂತು, ಅಂಥ ಮಕ್ಕಳ ತಂದೆ-ತಾಯಿಗಳು ಅಥವಾ ಪಾಲಕರು, 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ವಾಣಿಜ್ಯ ಉದ್ದೇಶಗಳಿಗಾಗಿ, ಅವರು ಅಂಥ ಮಕ್ಕಳಿಗೆ ಕೆಲಸ ಮಾಡಲು ಅನುಮತಿ ನೀಡಿದ ಹೊರತು ದಂಡನೀಯನಾಗತಕ್ಕದ್ದಲ್ಲ.

(1ಎ) 3ಎ ಪ್ರಕರಣ ಉಪಬಂಧಗಳನ್ನು ಉಲ್ಲಂಘಿಸಿ, ಕೆಲಸ ಮಾಡಲು ಯಾರೇ ತರುಣರನ್ನು ನಿಯೋಜಿಸುವ ಅಥವಾ ಅಂಥ ಕೆಲಸಕ್ಕೆ ಯಾರೇ ತರುಣರಿಗೆ ಅನುಮತಿ ನೀಡುವ ಯಾರೇ ಆಗಲಿ, ಆರು ತಿಂಗಳುಗಳಿಗೆ ಕಡಿಮೆಯಿಲ್ಲದಂಥ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದಂಥ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಇವರೆಡರದಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ಅಂಥ ತರುಣರ ತಂದೆ-ತಾಯಿಗಳು ಅಥವಾ ಪಾಲಕರು, 3ಎ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಅಂಥ ತರುಣರಿಗೆ ಕೆಲಸ ಮಾಡಲು ಅನುಮತಿ ನೀಡಿದ್ದ ಹೊರತು ದಂಡನೀಯರಾಗತಕ್ಕದ್ದಲ್ಲ.

(1ಬಿ) ಉಪ-ಪ್ರಕರಣ(1) ಮತ್ತು (1ಎ)ಗಳಲ್ಲಿ ಏನೇ ಒಳಗೊಂಡಿದ್ದರೂ, 3ನೇ ಪ್ರಕರಣ ಅಥವಾ 3ಎ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾರೇ ಮಕ್ಕಳ ಅಥವಾ ಯಾರೇ ತರುಣರ ತಂದೆ-ತಾಯಿಗಳು ಅಥವಾ ಪಾಲಕರು ಮಾಡುವ ಮೊದಲ ಸಲದ ಅಪರಾಧದ ಸಂದರ್ಭದಲ್ಲಿ ದಂಡನೆಗೆ ಗುರಿಯಾಗತಕ್ಕದ್ದಲ್ಲ.

(2) ಪ್ರಕರಣ 3 ಅಥವಾ ಪ್ರಕರಣ 3ಎ ಮೇರೆಗೆ ಅಪರಾಧಿಯೆಂದು ನಿರ್ಣೀತನಾಗಿರುವ ಯಾರೇ ಆಗಲಿ, ತದನಂತರವೂ ಅಂಥದೇ ಅಪರಾಧವನ್ನು ಮಾಡಿದರೆ, ಒಂದು ವರ್ಷಕ್ಕೆ ಕಡಿಮೆಯಿಲ್ಲದಂಥ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

(2ಎ) ಉಪಪ್ರಕರಣ 2ರಲ್ಲಿ ಏನೇ ಒಳಗೊಂಡಿದ್ದರೂ, 3ನೇ ಪ್ರಕರಣದ ಅಥವಾ 3ಎ ಪ್ರಕರಣದ ಮೇರೆಗೆ ಅಪರಾಧಿಯೆಂದು ನಿರ್ಣೀತನಾಗಿರುವ ತಂದೆ-ತಾಯಿ ಅಥವಾ ಪಾಲಕನು, ತದನಂತರವೂ ಅಂಥದೇ ಅಪರಾಧವನ್ನು ಮಾಡಿದರೆ, ಅವನು(ಳು) ಹತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(3) ****** (ಬಿಟ್ಟುಬಿಡಲಾಗಿದೆ)

(ಡಿ) ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲಿಸಲು ತಪ್ಪುವ ಅಥವಾ ಅವುಗಳನ್ನು ಉಲ್ಲಂಘಿಸುವ

-ಯಾರೇ ಆಗಲಿ ಒಂದು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**14ಎ. ಅಪರಾಧಗಳು ಸಂಜ್ಞಾನಕ್ಕೆ ತೆಗೆದುಕೊಳ್ಳುವಂಥವಾಗಿರತಕ್ಕದ್ದು.–** ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2)ರಲ್ಲಿ ಏನೇ ಒಳಗೊಂಡಿದ್ದರೂ, ನಿಯೋಜಕನು ಎಸಗಿದ ಮತ್ತು 3ನೇ ಪ್ರಕರಣದ ಅಥವಾ 3ಎ ಪ್ರಕರಣದ ಮೇರೆಗಿನ ದಂಡನೀಯವಾದ ಅಪರಾಧವು ಸಂಜ್ಞಾನಕ್ಕೆ ತೆಗೆದುಕೊಳ್ಳುವಂಥದ್ದಾಗಿರತಕ್ಕದ್ದು.

**14ಬಿ. ಮಕ್ಕಳು ಮತ್ತು ತರುಣರ ದುಡಿಮೆ ಪುನರ್ವಸತಿ ನಿಧಿ.–** (1) ಸಮುಚಿತ ಸರ್ಕಾರವು, ಪ್ರತಿಯೊಂದು ಜಿಲ್ಲೆಯಲ್ಲಿ ಅಥವಾ ಎರಡು ಅಥವಾ ಹೆಚ್ಚು ಜಿಲ್ಲೆಗಳಿಗೆ ಮಕ್ಕಳು ಮತ್ತು ತರುಣರ ದುಡಿಮೆ ಪುನರ್ ವ್ಯವಸ್ಥೆ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು. ಆ ನಿಧಿಗೆ ಅಂತಹ ಜಿಲ್ಲೆಯ ಅಥವಾ ಜಿಲ್ಲೆಗಳ ಅಧಿಕಾರವ್ಯಾಪ್ತಿಯಲ್ಲಿ ಬರುವ ಮಕ್ಕಳ ಮತ್ತು ತರುಣರ ನಿಯೋಜಕನಿಂದ ವಸೂಲು ಮಾಡಿದ ಜುಲ್ಮಾನೆಯ ಮೊಬಲಗನ್ನು ಜಮೆ ಮಾಡತಕ್ಕದ್ದು.

(2) ಸಮುಚಿತ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಯಾವ ಮಕ್ಕಳು ಅಥವಾ ತರುಣರಿಗಾಗಿ ಖಾತೆಗೆ ಜುಲ್ಮಾನೆ ಮೊಬಲಗನ್ನು ಜಮೆ ಮಾಡಲಾಯಿತೋ, ಆ ಪ್ರತಿಯೊಬ್ಬರಿಗಾಗಿ ನಿಧಿಗೆ ಹದಿನೈದು ಸಾವಿರ ರೂಪಾಯಿಗಳ ಮೊಬಲಗನ್ನು ಜಮೆ ಮಾಡತಕ್ಕದ್ದು.

(3) ಉಪಪ್ರಕರಣಗಳು (1) ಮತ್ತು (2)ರ ಮೇರೆಗೆ ನಿಧಿಗೆ ಜಮೆ ಮಾಡಲಾದ ಮೊಬಲಗನ್ನು, ಸಮುಚಿತ ಸರ್ಕಾರವು, ನಿರ್ಧರಿಸಬಹುದಾದಂಥ ಬ್ಯಾಂಕುಗಳಲ್ಲಿ, ಠೇವಣಿ ಇಡತಕ್ಕದ್ದು ಅಥವಾ ಅದನ್ನು ಅಂಥ ರೀತಿಯಲ್ಲಿ ಹೂಡತಕ್ಕದ್ದು.

(4) ಉಪಪ್ರಕರಣ (3)ರ ಮೇರೆಗೆ, ಠೇವಣಿ ಇಡಲಾದ ಅಥವಾ ಸಂದರ್ಭಾನುಸಾರ ತೊಡಗಿಸಲಾದ ಹಣದ ಮೇಲೆ ಪ್ರಾಪ್ತವಾಗುವ ಬಡ್ಡಿ ಮೊಬಲಗನ್ನು, ಅಂಥ ಮೊಬಲಗು ಯಾವ ಹೆಸರಿನಲ್ಲಿ ಜಮೆಯಾಗಿದೆಯೋ ಆ ಮಕ್ಕಳಿಗೆ ಅಥವಾ ತರುಣರಿಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು.

**ವಿವರಣೆ.–** ಸಮುಚಿತ ಸರ್ಕಾರದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರ ಎಂಬುದರಲ್ಲಿ, ಸಂವಿಧಾನದ ಅನುಚ್ಛೇದ 239ಎ ಮೇರೆಗೆ, ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ ಅಥವಾ ಲೆಫ್ಟಿನೆಂಟ್ ಗವರ್ನರ್ ಒಳಗೊಂಡಿರತಕ್ಕದ್ದು.

**14ಸಿ. ರಕ್ಷಿಸಿದ ಮಕ್ಕಳಿಗೆ ಅಥವಾ ತರುಣರಿಗೆ ಪುನರ್ ವ್ಯವಸ್ಥೆ.–** ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಕೆಲಸಕ್ಕೆ ನಿಯೋಜನೆಗೊಂಡಿದ್ದ ಮತ್ತು ಅಂಥ ಕೆಲಸದಿಂದ ರಕ್ಷಿಸಿದ ಮಕ್ಕಳಿಗೆ ಅಥವಾ ತರುಣರಿಗೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನುಗಳಿಗೆ ಅನುಸಾರವಾಗಿ ಪುನರ್ ವ್ಯವಸ್ಥೆ ಕಲ್ಪಿಸತಕ್ಕದ್ದು.

**14ಡಿ. ಅಪರಾಧಗಳ ರಾಜಿ ಮೇಲೆ ವಿಲೆ.–** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2)ರಲ್ಲಿ ಏನೇ ಒಳಗೊಂಡಿದ್ದರೂ, ಜಿಲ್ಲಾ ಮ್ಯಾಜಿಸ್ಟ್ರೇಟನು, ಆಪಾದಿತ ವ್ಯಕ್ತಿಯು ಅರ್ಜಿ ಸಲ್ಲಿಸಿದಾಗ, ಆತನು ಮೊದಲ ಬಾರಿಗೆ ಎಸಗಿದ ಯಾವುದೇ ಅಪರಾಧವನ್ನು ಅಥವಾ ತಂದೆ–ತಾಯಿಯು ಅಥವಾ ಪಾಲಕನಾಗಿರುವ ಆಪಾದಿತ ವ್ಯಕ್ತಿಯು ಎಸಗಿದ ಯಾವುದೇ ಅಪರಾಧವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಮೊಬಲಗನ್ನು ಸಮುಚಿತ ಸರ್ಕಾರಕ್ಕೆ ಸಂದಾಯ ಮಾಡಿದ ಮೇಲೆ, 14ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಾಜಿಯ ಮೇಲೆ ವಿಲೆ ಮಾಡಬಹುದು.

(2) ಆಪಾದಿತನು ಅಪರಾಧದ ರಾಜಿಗಾಗಿ ಅಂಥ ಮೊಬಲಗನ್ನು ಸಂದಾಯ ಮಾಡಲು ವಿಫಲನಾದರೆ, ಆಗ, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಂಥ ವ್ಯಕ್ತಿಯ ವಿರುದ್ಧ ವ್ಯವಹರಣೆಗಳನ್ನು ಮುಂದುವರಿಸತಕ್ಕದ್ದು.

(3) ಯಾವುದೇ ಪ್ರಾಸಿಕ್ಯೂಷನ್ ಹೂಡುವ ಮುನ್ನ, ಯಾವುದೇ ಅಪರಾಧದ ಬಗ್ಗೆ ರಾಜಿ ಮಾಡಿಕೊಂಡಿದ್ದರೆ, ಅಂಥ ಅಪರಾಧಕ್ಕೆ ಸಂಬಂಧಪಟ್ಟಂತೆ ಆ ಅಪರಾಧಿಯ ವಿರುದ್ಧ ಅಂಥ ಅಪರಾಧದ ಬಗ್ಗೆ ಯಾವುದೇ ಪ್ರಾಸಿಕ್ಯೂಷನ್ ಹೂಡತಕ್ಕದ್ದಲ್ಲ.

(4) ಯಾವುದೇ ಪ್ರಾಸಿಕ್ಯೂಷನ್ ಹೂಡಿದ ತರುವಾಯ, ಯಾವುದೇ ಅಪರಾಧ ರಾಜಿಯಲ್ಲಿ ಕೊನೆಗೊಂಡಿದ್ದರೆ, ಅಂಥ ರಾಜಿಯನ್ನು, ಪ್ರಾಸಿಕ್ಯೂಷನ್ ವ್ಯವಹರಣೆಯು ಇತ್ಯರ್ಥದಲ್ಲಿರುವ ನ್ಯಾಯಾಲಯದ ಗಮನಕ್ಕೆ ಲಿಖಿತದಲ್ಲಿ ತರತಕ್ಕದ್ದು ಮತ್ತು ನ್ಯಾಯಾಲಯವು ರಾಜಿಗೆ ಅನುಮತಿಕೊಟ್ಟ ಮೇಲೆ, ಯಾವ ಅಪರಾಧಿಯು ರಾಜಿ ಮಾಡಿಕೊಂಡಿರುವನೋ ಆ ವ್ಯಕ್ತಿಯನ್ನು ವಿಮೋಚನೆಗೊಳಿಸತಕ್ಕದ್ದು.

**15. ದಂಡಗಳಿಗೆ ಸಂಬಂಧಪಟ್ಟಂತೆ ಮಾರ್ಪಾಟು ಮಾಡಿದ ಕೆಲವು ಕಾನೂನುಗಳ ಅನ್ವಯ.–** (1) 2ನೇ ಉಪಪ್ರಕರಣದಲ್ಲಿ ನಮೂದಿಸಲಾದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದ ಬಗ್ಗೆ ತಪ್ಪಿತಸ್ಥನೆಂದು ಮತ್ತು ಅಪರಾಧಿಯೆಂದು ನಿರ್ಣೀತನಾದ ಯಾರೇ ವ್ಯಕ್ತಿಯು, ಈ ಅಧಿನಿಯಮದ 14ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳಲ್ಲಿ ಉಪಬಂಧಿಸಿರುವ ದಂಡಗಳಿಗೆ ಗುರಿಯಾಗತಕ್ಕದ್ದೇ ವಿನಃ ಮತ್ತು ಆ ಉಪಬಂಧಗಳು ಅಡಕವಾಗಿರುವ ಯಾವುವೇ ಅಧಿನಿಯಮಗಳ ಮೇರೆಗೆ ಅಲ್ಲ.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾಗಿರುವ ಉಪಬಂಧಗಳು, ಕೆಳಗೆ ನಮೂದು ಮಾಡಿರುವ ಉಪಬಂಧಗಳಾಗಿವೆ–

(ಎ) ಕಾರ್ಖಾನೆಗಳ ಅಧಿನಿಯಮ, 1948 (1948 ರ 63)ರ 67ನೇ ಪ್ರಕರಣ;

(ಬಿ) ಗಣಿಗಳ ಅಧಿನಿಯಮ, 1952 (1952 ರ 35)ರ 40ನೇ ಪ್ರಕರಣ;

(ಸಿ) ವ್ಯಾಪಾರಿ ಹಡಗು ಅಧಿನಿಯಮ, 1958 (1958 ರ 44)ರ 109ನೇ ಪ್ರಕರಣ; ಮತ್ತು

(ಡಿ) ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, 1961 (1961 ರ 27)ರ 21ನೇ ಪ್ರಕರಣ.

**16. ಅಪರಾಧಗಳಿಗೆ ಸಂಬಂಧಪಟ್ಟ ಕಾರ್ಯವಿಧಾನ.–** (1) ಈ ಅಧಿನಿಯಮದ ಮೇರೆಗೆ ಅಪರಾಧವು ನಡೆದಿರುವ ಬಗ್ಗೆ ಯಾವನೇ ವ್ಯಕ್ತಿ, ಪೊಲೀಸ್ ಅಧಿಕಾರಿ ಅಥವಾ ಪರಿಶೀಲಕನು ಫಿರ್ಯಾದನ್ನು ಸಕ್ಷಮ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಯಾವುದೇ ನ್ಯಾಯಾಲಯದಲ್ಲಿ ದಾಖಲು ಮಾಡಬಹುದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ ನಿಯಮಿಸಿದ ವೈದ್ಯಕೀಯ ಪ್ರಾಧಿಕಾರಿಯು ಮಗುವಿನ ವಯಸ್ಸಿನ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(3) ಮಹಾನಗರ ಮ್ಯಾಜಿಸ್ಟ್ರೇಟನ ಅಥವಾ ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**17. ಪರಿಶೀಲಕರ ನೇಮಕ.–** ಸಮುಚಿತ ಸರ್ಕಾರವು, ಈ ಅಧಿನಿಯಮದ ಉಪಬಂಧಗಳ ಪಾಲನೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವ ಉದ್ದೇಶಗಳಿಗಾಗಿ ಪರಿಶೀಲಕನನ್ನು ನೇಮಕ ಮಾಡಬಹುದು ಮತ್ತು ಹಾಗೆ ನೇಮಕಗೊಂಡ ಯಾವನೇ ಪರಿಶೀಲಕನು ಭಾರತ ದಂಡ ಸಂಹಿತೆ (1860 ರ 45) ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರನಾಗಿರುವುದಾಗಿ ಭಾವಿಸತಕ್ಕದ್ದಲ್ಲ.

**17ಎ. ಜಿಲ್ಲಾ ಮ್ಯಾಜಿಸ್ಟ್ರೇಟ್‌ನು ಉಪಬಂಧಗಳನ್ನು ಅನುಷ್ಠಾನಗೊಳಿಸಬೇಕು.–** ಈ ಅಧಿನಿಯಮದ ಉಪಬಂಧಗಳು ಸಮರ್ಪಕವಾಗಿ ಕಾರ್ಯಗತವಾಗುತ್ತಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು, ಸಮುಚಿತ ಸರ್ಕಾರವು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅವಶ್ಯವಿರಬಹುದಾದಂಥ ಅಧಿಕಾರಗಳನ್ನು ಪ್ರದಾನ ಮಾಡಬಹುದು ಮತ್ತು ಅಂಥ ಕರ್ತವ್ಯಗಳನ್ನು ವಿಧಿಸಬಹುದು ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟನು, ತನಗೆ ಹಾಗೆ ಪ್ರದತ್ತವಾದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮತ್ತು ಎಲ್ಲ ಅಥವಾ ಯಾವುದೇ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ತನಗೆ ಅಧೀನನಾದ ಒಬ್ಬ ಅಧಿಕಾರಿಯನ್ನು ನಿರ್ದಿಷ್ಟಪಡಿಸಬಹುದು ಮತ್ತು ಹಾಗೆ ನಿಯಮಿಸಬಹುದಾದ ಅಧಿಕಾರಿಯು ಸ್ಥಳೀಯ ಪರಿಮಿತಿಗಳ ವ್ಯಾಪ್ತಿಯೊಳಗೆ ಅಂಥ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**17ಬಿ. ತಪಾಸಣೆ ಮತ್ತು ಮೇಲ್ವಿಚಾರಣೆ.–** ಸಮುಚಿತ ಸರ್ಕಾರವು, ಮಕ್ಕಳ ನಿಯೋಜನೆಯನ್ನು ನಿಷೇಧಿಸಿರುವ ಮತ್ತು ಅಪಾಯಕಾರಿ ವೃತ್ತಿಗಳನ್ನು ಅಥವಾ ಅಂಥ ಪ್ರಕ್ರಿಯೆಗಳನ್ನು ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ನಿಯತಕಾಲಿಕವಾಗಿ ತಪಾಸಣೆಯನ್ನು ಮಾಡತಕ್ಕದ್ದು ಅಥವಾ ನಿಯತಕಾಲಿಕವಾಗಿ ತಪಾಸಣೆಯನ್ನು ಮಾಡಿಸತಕ್ಕದ್ದು ಮತ್ತು ಸೂಕ್ತವೆಂದು ತಾನು ಭಾವಿಸುವಂಥ ಅವಧಿಯ ಅಂತರಗಳಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮೇಲ್ವಿಚಾರಣೆ ಮಾಡತಕ್ಕದ್ದು.

**18. ನಿಯಮ ರಚನಾಧಿಕಾರ.–** (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ಉಪಪ್ರಕರಣ (2)ರ (ಬಿ) ಖಂಡದ ಮೇರೆಗೆ ಷರತ್ತುಗಳು ಹಾಗೂ ಸುರಕ್ಷತಾ ಕ್ರಮಗಳು ಮತ್ತು ಪ್ರಕರಣ 3ರ (2)ನೇ ಉಪಪ್ರಕರಣದ ವಿವರಣೆಗೆ (ಬಿ) ಖಂಡದ ಮೇರೆಗೆ ಇತರೆ ಚಟುವಟಿಕೆಗಳು;

(ಬಿ) ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರ ಪದಾವಧಿ, ಆ ಪದಗಳಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿ ಮತ್ತು ಅವರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು ಮತ್ತು 5ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಉಪಸಮಿತಿಗೆ ಸದಸ್ಯನಲ್ಲದವನನ್ನು ಯಾವ ಷರತ್ತುಗಳು ಮತ್ತು ಪರಿಬಂಧಗಳಿಗೆ ಒಳಪಟ್ಟು ನೇಮಕ ಮಾಡಬಹುದೋ ಆ ಷರತ್ತುಗಳು ಮತ್ತು ಪರಿಬಂಧಗಳು;

(ಸಿ) 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ವೇಳೆಗಳಲ್ಲಿ ತರುಣನನ್ನು ಕೆಲಸ ಮಾಡಲು ಅಗತ್ಯಪಡಿಸಬಹುದೋ ಅಥವಾ ಅನುಮತಿಸಬಹುದೋ ಆ ವೇಳೆಗಳ ಸಂಖ್ಯೆ;

(ಡಿ) ಉದ್ಯೋಗದಲ್ಲಿರುವ ಅಥವಾ ಉದ್ಯೋಗವನ್ನು ಬಯಸುವ ಯುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ವಯಸ್ಸಿನ ಪ್ರಮಾಣಪತ್ರವನ್ನು ಕೊಡುವುದು; ಅಂಥ ಪ್ರಮಾಣಪತ್ರವನ್ನು ಕೊಡಬಹುದಾದಂಥ ವೈದ್ಯಕೀಯ ಪ್ರಾಧಿಕಾರಗಳು; ಅಂಥ ಪ್ರಮಾಣಪತ್ರದ ನಮೂನೆ ಮತ್ತು ಅದಕ್ಕಾಗಿ ವಿಧಿಸಬಹುದಾದಂಥ ಚಾರ್ಜುಗಳು ಮತ್ತು ಅಂಥ ಪ್ರಮಾಣಪತ್ರವನ್ನು ಕೊಡಬಹುದಾದಂಥ ರೀತಿ:

ಪರಂತು, ಅರ್ಜಿಯ ಜೊತೆ ಸಂಬಂಧಪಟ್ಟ ಅಧಿಕಾರಿಗೆ ವಯಸ್ಸಿನ ಬಗ್ಗೆ ಮನದಟ್ಟಾಗುವಂತೆ ಸಾಕ್ಷ್ಯವಿದ್ದರೆ, ಯಾವುದೇ ಅಂಥ ಪ್ರಮಾಣಪತ್ರವನ್ನು ಕೊಡುವುದಕ್ಕಾಗಿ, ಯಾವುದೇ ಚಾರ್ಜನ್ನು ವಿಧಿಸತಕ್ಕದ್ದಲ್ಲ.

(ಇ) 11ನೇ ಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದಿರುವ ರಿಜಿಸ್ಟರು ಒಳಗೊಳ್ಳಬೇಕಾದಂಥ ಇತರ ವಿವರಗಳು.

(ಎಫ್) 14(ಬಿ) ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ, ಮಕ್ಕಳಿಗೆ ಅಥವಾ ತರುಣರಿಗೆ ಮೊಬಲಗನ್ನು ಸಂದಾಯ ಮಾಡುವ ರೀತಿ;

(ಜಿ) 14(ಡಿ) ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಪರಾಧವನ್ನು ರಾಜಿ ಮಾಡಿಕೊಳ್ಳುವ ಮತ್ತು ಸಮುಚಿತ ಸರ್ಕಾರಕ್ಕೆ ಮೊಬಲಗನ್ನು ಸಂದಾಯ ಮಾಡುವ ರೀತಿ;

(ಹೆಚ್) 17(ಎ) ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅಧಿಕಾರಿಯು ಚಲಾಯಿಸಬೇಕಾದ ಅಧಿಕಾರಗಳು ಮತ್ತು ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಯಾವ ಸ್ಥಳೀಯ ಪರಿಮಿತಿಗಳ ಒಳಗೆ ಅಂಥ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸಬೇಕೋ ಆ ಸ್ಥಳೀಯ ಪರಿಮಿತಿಗಳು.

**19. ನಿಯಮಗಳು ಮತ್ತು ಅಧಿಸೂಚನೆಗಳನ್ನು ಸಂಸತ್ತು ಅಥವಾ ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 4ನೇ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದಂತೆ ಹಾಗೆ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದಂತೆ ಹಾಗೆ ಇರಿಸಲಾದ ಅಧಿವೇಶನ ಅಥವಾ ನಿರಂತರವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಅಥವಾ ಅಧಿಸೂಚನೆಯನ್ನು ಹೊರಡಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಅಧಿಸೂಚನೆಯು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ಆ ರಾಜ್ಯದ ವಿಧಾನಮಂಡಲದ ಮುಂದೆ ಇಡತಕ್ಕದ್ದು.

**20. ಕಾನೂನಿನ ಕೆಲವು ಇತರ ಉಪಬಂಧಗಳು ಪ್ರತಿಷೇಧಿತವಾಗಿಲ್ಲ.–** 15ನೇ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳಿಗೊಳಪಟ್ಟು ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಕಾರ್ಖಾನೆಗಳ ಅಧಿನಿಯಮ, 1948 (1948 ರ 63); ನೆಡುತೋಪು ಕಾರ್ಮಿಕರ ಅಧಿನಿಯಮ, 1951 (1951 ರ 69); ಮತ್ತು ಗಣಿಗಳ ಅಧಿನಿಯಮ, 1952 (1952 ರ 35) – ಇವುಗಳ ಉಪಬಂಧಗಳ ಜೊತೆಗೆ ಇರತಕ್ಕದೇ ಹೊರತು ಅವುಗಳನ್ನು ಅಲ್ಪೀಕರಿಸಿ ಅಲ್ಲ.

**21. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯ ಅಥವಾ ವಿಹಿತವಾಗಿರುವುದಾಗಿ ಅದಕ್ಕೆ ಕಂಡುಬರಬಹುದಾದಂತೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದೆ ಇರುವಂಥ ಉಪಬಂಧಗಳನ್ನು ಮಾಡಬಹುದು:

ಪರಂತು, ಯಾವುದೇ ಅಂಥ ಆದೇಶವನ್ನು, ಈ ಅಧಿನಿಯಮವು ರಾಷ್ಟ್ರಪತಿಯ ಅನುಮತಿಯನ್ನು ಸ್ವೀಕರಿಸಿದಂಥ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಸದನಗಳ ಮುಂದೆ ಇಡತಕ್ಕದ್ದು.

**22. ನಿರಸನ ಮತ್ತು ಉಳಿಸುವಿಕೆಗಳು.–** (1) ಮಕ್ಕಳ ನಿಯೋಜನೆಯ ಅಧಿನಿಯಮ, 1938 (1938 ರ 26) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಹಾಗೆ ನಿರಸನಗೊಳಿಸಿದ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಲಾಗಿರುವುದಾಗಿ ಅಥವಾ ಕೈಗೊಂಡಿರುವುದಾಗಿ ತಾತ್ಪರ್ಯವಾಗುವ ಯಾವುದೇ ಕಾರ್ಯವನ್ನು ಅಥವಾ ಕ್ರಮವನ್ನು ಅದು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವ ಮಟ್ಟಿಗೆ, ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

ಪ್ರಕರಣಗಳು 23 ರಿಂದ 26.– 2001ನೇ ಇಸವಿಯ 30ನೇ ಸಂಖ್ಯೆಯ ಅಧಿನಿಯಮದ ಮೂಲಕ ಬಿಟ್ಟುಬಿಡಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**ಅನುಸೂಚಿ**

(3ಎ ಪ್ರಕರಣವನ್ನು ನೋಡಿ)

(1) ಗಣಿಗಳು

(2) ಬಹುಬೇಗನೆ ಬೆಂಕಿ ಹತ್ತಿಕೊಳ್ಳುವ ವಸ್ತುಗಳು ಅಥವಾ ಸ್ಫೋಟಕಗಳು

(3) ಅಪಾಯಕಾರಿ ಪ್ರಕ್ರಿಯೆ

**ವಿವರಣೆ.**– ಈ ಅನುಸೂಚಿಯ ಉದ್ದೇಶಗಳಿಗಾಗಿ, "ಅಪಾಯಕಾರಿ ಪ್ರಕ್ರಿಯೆ" ಎಂಬುದಕ್ಕೆ ಕಾರ್ಖಾನೆಗಳ ಅಧಿನಿಯಮ, 1948 (1948ರ 63)ರ (ಸಿಬಿ) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವೇ ಇಲ್ಲಿಯೂ ಇರತಕ್ಕದ್ದು.

ಡಾ. ರೀಟಾ ವಸಿಷ್ಠ
ಭಾರತ ಸರ್ಕಾರದ ಕಾರ್ಯದರ್ಶಿ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

VIJAY N M Digitally signed by VIJAY N M